**ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕಃ 18-04-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ವಿ.ಟಿ.ಕೆ. ವಕೀಲರಿಂದಃ**

ಅಂಗನ್ಯೂನತ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ -12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ವಿ.ಎಸ್.ವಿ ವಕೀಲರಿಂದಃ**

ನನ್ನ ಸ್ವಂತ ಊರು ಭದ್ರಾವತಿ ಎಂದರೆ ನಿಜ. ನಾನು ರಾಣೇಬೆನ್ನೂರಿನಲ್ಲಿ ವಾಸವಾಗಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನಾನು ಪ್ರತಿ ತಿಂಗಳು 30 ಸಾವಿರ ದುಡಿಯುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ಅಪಘಾತ ಆದ ದಿವಸ ಬೈಕನ್ನು ನಾನೇ ಚಲಾಯಿಸುತ್ತಿದ್ದೇನು ಎಂದರೆ ನಿಜ. ಬೈಕು ಚಲಾಯಿಸಲು ಡಿ ಎಲ್ ಇದೆಯಾ ಎಂದರೆ ಇದೆ. ಸಾಕ್ಷಿಯೂ ಡಿ ಎಲ್ ನ್ನು ತೋರಿಸಿದ್ದಾರೆ. ಸದರಿ ದಾಖಲೆಯ ಪ್ರಕಾರ ಅರ್ಜಿದಾರರಿಗೆ ಅಪಘಾತ ಆದ ದಿವಸ ಡಿ ಎಲ್ ಚಾಲ್ತಿಯಲ್ಲಿರುವುದು ಕಂಡು ಬರುತ್ತದೆ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದರೆ ಟ್ರಾಕ್ಟರ್ ಮತ್ತು ಟ್ರೇಲರ್ ತಪ್ಪಿನಿಂದ ಆಯಿತು. ನನಗೆ ಟ್ರಾಕ್ಟರ್ ಬಂದು ಡಿಕ್ಕಿ ಹೊಡೆಯಿತೇ ಅಥವಾ ಟ್ರೇಲರ್ ಬಂದು ಡಿಕ್ಕಿ ಹೊಡೆಯಿತೇ ಎಂದರೆ ಟ್ರಾಕ್ಟರ್ ಮತ್ತು ಟ್ರೇಲರ್ ಎರಡೂ ಡಿಕ್ಕಿ ಹೊಡೆದಿರುತ್ತವೆ. ನಾನು ಮೆಗ್ಗಾನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ದೂರು ಕೊಟ್ಟಿರುತ್ತೇನೆ ಎಂದರೆ ನಿಜ.

2. ನಿ ಪಿ -2 ದೂರಿನಲ್ಲಿ ಟ್ರೇಲರ್ ನ ಬಲಭಾಗದ ಹಿಂಬದಿಯ ಚಕ್ರ ನನ್ನ ಬೈಕ್ ನ ಎಡ ಹ್ಯಾಂಡಲ್ ಗೆ ಟಚ್ ಆಯಿತು ಎಂದು ಬರೆಯಲಾಗಿದೆ ಎಂದರೆ ನಿಜ. ಅಪಘಾತದಲ್ಲಿ ನನ್ನ ಎಡಗಾಲಿಗೆ ಪೆಟ್ಟಾಗಿದೆ. ನಾನು ಮೊದಲು ಮೆಗ್ಗಾನ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು 3 ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಮೆಗ್ಗಾನ ಆಸ್ಪತ್ರೆಯಲ್ಲಿ ನನಗೆ ಎಕ್ಸರೆ ಮಾಡಿದ್ದಾರೆ. ಆ ಎಕ್ಸರೆ ವರದಿಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ನಿಜ. ನನಗೆ ಮೂಳೆ ಮುರಿತದ ಗಾಯಗಳು ಆಗಿಲ್ಲದ ಕಾರಣ ಮೆಗ್ಗಾನ ಆಸ್ಪತ್ರೆಯ ಎಕ್ಸರೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರಲಿಲ್ಲ ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ನಿ ಪಿ -6 ರಿಂದ 8 ಮತ್ತು 12 ನ್ನು ಸುಳ್ಳು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಬೈಕ್ ಚಲಾಯಿಸುತ್ತಿದ್ದೇನೆ

ಎಂದರೆ ಇಲ್ಲ. ನನಗೆ ಅಪಘಾತದಿಂದ ಉಂಟಾದ ಗಾಯಗಳಿಂದ ಬೈಕು ಚಲಾಯಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ನನಗೆ ಬೈಕು ಚಲಾಯಿಸಲು ಆಗುವುದಿಲ್ಲ ಎಂದು ಡಿ ಎಲ್ ವಾಪಸ್ಸು ಆರ್ ಟಿ ಒ ದವರಿಗೆ ಕೊಟ್ಟಿದ್ದೀರಾ ಎಂದರೆ ಇಲ್ಲ. ನಾನು ಈಗಲೂ ಬೈಕು ಚಲಾಯಿಸಿಕೊಂಡು ಸ್ವಂತ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಟ್ರೇಲರ್ ಡಿಕ್ಕಿಪಡಿಸಿದ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1,3,4 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕರೆಸಲಾಯಿತು. ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.